ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಬೆಂಗಳೂರು ಮತ್ತು ದೇವನಹಳ್ಳಿ ಮಾರ್ಗದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಐಷಿಲ ವೇಗದೂತ ಮತ್ತು ಳಲ ಸಾಮಾನ್ಯ ಅಂದರೆ ಒಟ್ಟು ೧೮೨ ಬಸ್ಸುಗಳು ಪ್ರತಿನಿತ್ಯ ಸಂಚರಿಸುತ್ತಿವೆ.

ಆ) ನಿಜ.

ಇ) ಚಿಕ್ಕಬಳ್ಳಾಪುರ–ಬೆಂಗಳೂರುಗಳ ನಡುವೆ ಸಂಚರಿಸುತ್ತಿರುವ ೮ ತಡೆರಹಿತ ಸಾರಿಗೆಗಳು ಪ್ರಾರಂಭಿಕ ಸ್ಥಳಗಳಲ್ಲಿಯೇ ಪ್ರಯಾಣಿಕರಿಂದ ಭರ್ತಿಯಾಗುತ್ತಿರುವುದರಿಂದ ಈ ತಡೆರಹಿತ ಸಾರಿಗೆಗಳಿಗೆ ದೇವನಹಳ್ಳಿಯಲ್ಲಿ ನಿಲುಗಡೆ ನೀಡುವುದು ಉಪಯುಕ್ತವಲ್ಲ. ಅಲ್ಲದೆ ದೇವನಹಳ್ಳಿ ಮತ್ತು ಬೆಂಗಳೂರುಗಳ ನಡುವೆ ಸಂಚರಿಸುತ್ತಿರುವ ಬಸ್ಸುಗಳು ಪ್ರಸಕ್ತ ಸಾರಿಗೆ ಒತ್ತಡಕ್ಕೆ ಅನುಗುಣವಾಗಿರುವುದರಿಂದಲೂ, ಅದಾಗ್ಯೂ ಮತ್ತೊಮ್ಮೆ ಸಾರಿಗೆ ಸಮೀಕ್ಷೆ ನಡೆಸಿ ಅಗತ್ಯವೆನಿಸಿದಲ್ಲಿ ಬೆಂಗಳೂರು–ದೇವನಹಳ್ಳಿ ಮಾರ್ಗದಲ್ಲಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

ಜೀವನ್ ಭೀಮಾ ನಗರದಿಂದ ಬೆಂಗಳೂರು ಬಸ್ ನಿಲ್ದಾಣ ನಡುವೆ ಪ್ರಯಾಣಿಕರ ಒತ್ತಡ

೩೦೨೧. ಶ್ರೀ ಪಿ. ಸಿ. ಮಂಜಿನಿಸ್ವಾಮಯ್ಯ, (ದೇವನಹಳ್ಳಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜೀವನ್ ಭೀಮಾನಗರದಿಂದ ಬೆಂಗಳೂರು ಬಸ್ ನಿಲ್ದಾಣ ನಡುವೆ ಪ್ರಯಾಣಿಕರ ಒತ್ತಡ ಜಾಸ್ತಿ ಇರುವುದು ನಿಜವಲ್ಲವೆ ?

ಆ) ಪ್ರಸ್ತುತ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಇ) ಹಾಗಿದ್ದಲ್ಲಿ ಬೇಡಿಕೆ ಜಾಸ್ತಿ ಇರುವುದರಿಂದ ಈ ಮಾರ್ಗದಲ್ಲಿ ಇನ್ನೂ ಎರಡು ಬಸ್ಸುಗಳನ್ನು ಹೆಚ್ಚಾಗಿ ಓಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ನಿಜ.

ಆ) ಪ್ರಸ್ತುತ ಜೀವನ್ ಭೀಮಾನಗರದಿಂದ ಬೆಂಗಳೂರು ಬಸ್ ನಿಲ್ದಾಣಕ್ಕೆ ೬ ಬಸ್ಸುಗಳು ಓಡಾಡುತ್ತಿವೆ. ಸರಾಸರಿ ಪ್ರತಿ ೨೦ ನಿಮಿಷಗಳಿಗೊಮ್ಮೆ ಒಂದರಂತೆ ಎರಡೂ ಕಡೆಯಿಂದ ಒಟ್ಟು ೧೦೦ ಟ್ರಿಪ್‌ಗಳನ್ನು ಮಾಡುತ್ತಿವೆ.

ಇ) ಅವಶ್ಯಕತೆಗೆ ತಕ್ಕಂತೆ ಹಂತಹಂತವಾಗಿ ಹೆಚ್ಚು ಬಸ್ಸುಗಳನ್ನು ನೀಡಲಾಗುತ್ತದೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಈ ದಿನ ಬೆಳಿಗ್ಗೆ ಸಭೆ ಸೇರಿ ಪ್ರಸ್ತುತ ಅಧಿವೇಶನದ ಕಾರ್ಯಕಲಾಪಗಳನ್ನು ಕೆಳಕಂಡಂತೆ ನಡೆಸಲು ತೀರ್ಮಾನಿಸಿತು.

೧. ವಿಶ್ವೇಯ ಕಾರ್ಯಕಲಾಪಗಳು

ಅ) ೧೯೮೪–೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಅವುಗಳನ್ನು ಮತಕ್ಕೆ ಹಾಕುವುದು.

ಆ) ೧೯೮೮–೮೯ನೇ ಸಾಲಿನ ಅನುಪೂರಕ ಅಂದಾಜುಗಳಿಗೆ (ಮೊದಲನೆ ಕಂತು) ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಅವುಗಳನ್ನು ಮತಕ್ಕೆ ಹಾಕುವುದು.